## ಗಮನದಲ್ಲಿಡಬೇಕಾದ ಅಂಶಗಳು :

* 21 ದಿನಗಳ ನಂತರ ರುಚಿಕರವಾದ ಪೌಷ್ಠಿಕಾಂಶ ಭರಿತ ಹುಲ್ಲನ್ನು ದೊಡ್ಡ ರಾಸುಗಳಿಗೆ ತಿನ್ನಿಸಬೇಕು.
* ಸರಿಯಾದ ಪ್ರಮಾಣದಲ್ಲಿ ಯೂರಿಯಾ ಉಪಚಾರವನ್ನು ಮಾಡಬೇಕು.
* ಯೂರಿಯಾವನ್ನು ನೀರಿನಲ್ಲಿ ಸರಿಯಾಗಿ ಕರಗಿಸಬೇಕು.
* 6 ತಿಂಗಳಿಗಿಂತ ಕಡಿಮೆ ವಯಸ್ಸಿನ ಕರುಗಳಿಗೆ ಯೂರಿಯಾ ಉಪಚರಿಸಿದ ಮೇವನ್ನು ಕೊಡಬಾರದು.
* ಪ್ರತಿ ಸಾರಿ ಹುಲ್ಲನ್ನು ಸಂಸ್ಕರಿಸುವಾಗ ಹೊಸದಾಗಿ ಯೂರಿಯಾ ಮಿಶ್ರಣ ತಯಾರಿಸಿಕೊಳ್ಳಬೇಕು
* ಸಂಸ್ಕರಿಸುವ ಹುಲ್ಲನ್ನು ಆದಷ್ಟು ಒತ್ತೊತ್ತಾಗಿ ಗಾಳಿಯಾಡದ ರೀತಿಯಲ್ಲಿ ಅಚ್ಚು + ಕಟ್ಟಾಗಿ ಕೂಡಿಸಬೇಕು.
* ಸಂಸ್ಕರಿಸಿದ ಹುಲ್ಲನ್ನು ಮಳೆ ಮತ್ತು ನೇರವಾದ ಬಿಸಿಲಿಂದ ರಕ್ಷಿಸಿ ಇಡಬೇಕು
* ಹುಲ್ಲಿನ ಪೆಂಡಿ ಅಥವಾ ಟೇಲ್‌ನ್ನು ಮಳೆ ಮತ್ತು ನೇರವಾದ ಬಿಸಿಲಿನಿಂದ ರಕ್ಷಿಸಿ ಇಡಬೇಕು.

## ಉಪಯೋಗಿಸುವ ಕ್ರಮ :

1. ಮನೆಯಲ್ಲಿರುವ ದನಗಳಿಗೆ ಒನ್ನು ತಿನ್ನಿಸಲು ಬೇಕಾಗುವಷ್ಟು ಹುಲ್ಲನ್ನು ಮಾತ್ರ ತೆಗೆದು ಮತ್ತೆ ಗಾಳಿಯಾಡದಂತೆ ಮುಚ್ಚಬೇಕು.
2. ಹುಲ್ಲನ್ನು ರಾಸುಗಳಿಗೆ ತಿನ್ನಿಸುವ ಮೊದಲು ಅರ್ಧ ಗಂಟೆ ಕಾಲ ಗಾಳಿಗೆ ಆರಲು ಬಿಡಬೇಕು.
3. ರಾಸುಗಳಿಗೆ ದಿನನಿತ್ಯದ ಆಹಾರದೊಂದಿಗೆ ಯೂರಿಯಾ ಉಪಚರಿಸಿದ ಮೇವನ್ನು ಕೊಡಬಹುದು.
4. ಹಸುಗಳಿಗೆ ಪೌಷ್ಠೀಕರಿಸಿದ ಹುಲ್ಲು ತಿನ್ನಿಸುವದನ್ನು ಹಂತ ಹಂತವಾಗಿ ರೂಢಿಸಬೇಕು ಹಾಗೂ ಪ್ರಾರಂಭದಲ್ಲಿ ಹಸುಗಳು ಸಂಸ್ಕರಿಸಿದ ಹುಲ್ಲನ್ನು ಇಷ್ಟಪಡದೆ ಇದ್ದಲ್ಲಿ ಅದಕ್ಕೆ ಬೆಲ್ಲದ ನೀರು ಅಥವಾ ಹಿಂಡಿ ಮಿಶ್ರಿತ ನೀರನ್ನು ಸಿಂಪಡಿಸಿ ತಿನ್ನುವಂತೆ ಮಾಡಬೇಕು.

## ಒಣಮೇವಿನ ಹಿತಮಿತ ಬಳಕೆಗಾಗಿ ಅನುಸರಿಸಬೇಕಾದ ವಿಧಾನಗಳು

1. ಜಾನುವಾರುಗಳಿಗೆ ಮೇವನ್ನು ಯಾವಾಗಲು ಗೋದಲೆ (ದವಣಿ) ಗಳಲ್ಲೇ ಹಾಕಿ ತಿನ್ನಲು ಬಿಡಬೇಕು. ಹೀಗೆ ಮಾಡುವುದರಿಂದ ಮೇವು ಹಾಳಾಗುವುದು ತಪ್ಪುವುದಲ್ಲದೇ, ಸಗಣಿ ಮತ್ತು ಮೂತ್ರಗಳಿಂದ ಮಲಿನಗೊಳ್ಳುವುದಿಲ್ಲ.
2. ದಪ್ಪ ಕಾಂಡವುಳ್ಳ ಹಾಗೂ ಎತ್ತರವಾಗಿ ಬೆಳೆಯುವ ಮೇವನ್ನು ಉದಾಹರಣೆಗೆ ಜೋಳ, ಆಫ್ರಿಕನ್ ಮೆಕ್ಕೆಜೋಳ, ಸಜ್ಜೆಯನ್ನು ಮೇವಿನ ಕತ್ತರಿಗಳಿಂದ ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ತಿನ್ನಲು ಕೊಡಬೇಕು.
3. ಒಂದೇ ಬಾರಿಗೆ ಹೆಚ್ಚು ಮೇವನ್ನು ಜಾನುವಾರುಗಳ ಮುಂದೆ ರಾಶಿ ಹಾಕುವುದಕ್ಕಿಂತ ಆಗಾಗ್ಗೆ ಸ್ವಲ್ಪ ಸ್ವಲ್ಪವಾಗಿ ಹಾಕುವುದರಿಂದ ಮೇವಿನ ಹಿತಮಿತವಾದ ಬಳಕೆಯಾಗುತ್ತದೆ.
4. ತೊಗರಿ, ಹುರಳಿ, ಹೆಸರು ಮುಂತಾದ ಸಣ್ಣ ಎಲೆಗಳುಳ್ಳ ಹೊಟ್ಟಿನಂತಹ ಮೇವನ್ನು ಯಾವಾಗಲು ದೊಡ್ಡದಾದ ಬುಟ್ಟಿ ಇಲ್ಲವೆ ತಿಂಡಿ ತಿನ್ನಿಸುವ ಬಕೆಟ್‌ಗಳಲ್ಲಿ ಹಾಕಿ ತಿನ್ನಲು ಕೊಡಬೇಕು.
5. ಯಾವುದೇ ಹೊಸ ಮೇವನ್ನು ತಿನ್ನಲು ಕೊಡುವಾಗ ಮೊದಲು ಸ್ವಲ್ಪ ಪ್ರಮಾಣದಲ್ಲಿ ಹಾಕುತ್ತಾ ಹೋಗಬೇಕು.

**ತಾಂತ್ರಿಕ ಸಲಹೆ**

**ಡಾ. ಜಯಶಂಕರ ಎನ್**

**ಡಾ. ಪ್ರಕಾಶಕುಮಾರ ರಾಠೋಡ**

**ಡಾ. ಅನಂತ ರಾವ ದೇಸಾಯಿ**

**ಶ್ರೀ. ದತ್ತು ರೆಡ್ಡಿ**

ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ**

ವಿಶ್ವಬ್ಯಾಂಕ್ ಅನುದಾನಿತ ಸುಜಲಾ–3ರ ಅಡಿ

"ಜಾನುವಾರು ಆಧಾರಿತ ವಿಸ್ತರಣಾ ಚಟುವಟಿಕೆಗಳು"

# "ಒಣಮೇವು ಪೌಷ್ಠೀಕರಣ"



**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ**

**ಪ್ರಧಾನ ಸಂಶೋಧಕರು**

ಕೆಡಬ್ಲ್ಯೂಡಿಪಿ-II (ಸುಜಲಾ-III) ಯೋಜನೆ,

ಬೀದರ ಘಟಕ,

ಪಶುವೈದ್ಯಕೀಯ ಮತ್ತು ಪಶುಸಂಗೋಪನಾ ವಿಸ್ತರಣಾ ವಿಭಾಗ

ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

ದೂರವಾಣಿ : 08482–245084

E-mail : vcbsujala@gmail.com

**ಪೀಠಿಕೆ :**

ಬೇಸಿಗೆಯಲ್ಲಿ ನೀರಿನ ಅಭಾವವಿರುವ ಕಾರಣದಿಂದಾಗಿ ಹೈನುರಾಸುಗಳಿಗೆ ಹಸಿಮೇವನ್ನು ನೀಡುವದು ತುಂಬಾ ಕಷ್ಟಕರವಾಗಿದೆ. ಆದ್ದರಿಂದ ಇಂತಹ ಸಮಯದಲ್ಲಿ ಒಣ ಮೇವನ್ನು ಬಳಸಬೇಕಾಗುತ್ತದೆ. ಒಣ ಮೇವನ್ನು ಹಾಗೆಯೇ, ರಾಸುಗಳಿಗೆ ನೀಡುವ ಬದಲು ಸಂಸರಿಸಿದ ಅಥವಾ ಪೌಷ್ಠೀಕರಿಸಿದ ಹುಲ್ಲನ್ನು ನೀಡುವುದರಿಂದ ರೈತರಿಗೆ ಹಾಗೂ ರಾಸುಗಳಿಗೆ ಹೆಚ್ಚಿನ ಪ್ರಯೋಜನಗಳಿವೆ. ಇದರಿಂದ ಕಳಪೆ ಮಟ್ಟದ ಸತ್ವಹೀನವಾದ ಒಣಮೇವನ್ನು ರಾಸುಗಳಿಗೆ ಉಪಯೋಗಿಸದಂತಾಗುತ್ತದೆ. ಪೌಷ್ಠಿಕರಿಸಿ ಒಣ ಮೇವನ್ನು ಪೌಷ್ಠೀಕರಿಸಲು ಕೆಲವು ಮುಖ್ಯ ವಿಧಾನಗಳನ್ನು ಈ ಕೆಳಗೆ ನಮೂದಿಸಲಾಗಿದೆ.

1. ಯುರಿಯಾ–ಕಾಕಂಬಿ–ಖನಿಜಾಂಶ ಸಿಂಪರಣೆ
2. ಯೂರಿಯಾದಿಂದ ಒಣಮೇವಿನ ಪರಿಷ್ಕರಣೆ
3. ಯೂರಿಯಾ/ಖನಿಜಾಂಶ ಸಿಂಪರಣೆ
4. ಯೂರಿಯಾ ಅಮೋನಿಯೇಷನ್ ಉಪಚಾರ

ಇವೆಲ್ಲ ವಿಧಾನಗಳಿಂದ ರೈತರು ಒಣಮೇವನ್ನು ಪೌಷ್ಠಿಕರಿಸಬಹುದಾದರೂ ಕೂಡ ಯುರಿಯಾದಿಂದ ಒಣಮೇವಿನ ಪೌಷ್ಠೀಕಗಿಸುವದರ ಬಗ್ಗೆ ಮಾಹಿತಿಯನ್ನು ಪ್ರಸ್ತುತಪಡಿಸಲಾಗಿದೆ.

**ಯೂರಿಯಾದಿಂದ ಒಣಮೇವಿನ ಪರಿಷ್ಕರಣೆ / ಪೌಷ್ಠೀಕರಣ**

ಯೂರಿಯಾದಿಂದ ಪೌಷ್ಠಿಕರಣೆ ಮಾಡಲು ತೆಳು ಕಾಂಡವುಳ್ಳ ಭತ್ತ, ರಾಗಿ, ಗೋಧಿ ಹಾಗೂ ಕಬ್ಬಿನ ವಾಡಿ (ಒಣಗಿದ ಹುಲ್ಲು) ಯೋಗ್ಯವಾಗಿವೆ.

**ಯೂರಿಯಾ ಪರಿಷ್ಕರಿಸಿದ ಮೇವಿನ ಲಾಭಗಳು :**

1. ಮೇವು ಹಾಳಾಗುವುದನ್ನು ತಡೆಯಬಹುದು
2. ಹೆಚ್ಚು ಜೀರ್ಣವಾಗುತ್ತದೆ
3. ಸಸಾರಜನಕ ಪ್ರಮಾಣ ಹೆಚ್ಚಾಗುತ್ತದೆ
4. ಮೇವಿನ ಸೇವನೆ ಹೆಚ್ಚಾಗುತ್ತದೆ
5. ಹೆಚ್ಚು ನಾರಿನಾಂಶ ಜೀರ್ಣವಾಗುವುದು ಮತ್ತು ಪ್ರೋಟಿನ್ ಅಂಶ ಹೆಚ್ಚಾಗಿ ಸಿಗುವುದರಿಂದ ಹಾಲಿನ ಉತ್ಪಾದನೆ ಹೆಚ್ಚಾಗುವದು.
6. ಯೂರಿಯಾ ಸಂಸ್ಕರಿಸಿದ ಹುಲ್ಲು ನೀಡುವುದರಿಂದ ಹಿಂಡಿ ಮಿಶ್ರಣವನ್ನು ಶೇ. 30–35 ರಷ್ಟು (1/3 ನೇ ಭಾಗ) ಕಡಿಮೆ ಮಾಡಬಹುದು. ಇದರಿಂದ ಹಾಲಿನ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ
7. ಹಸುವಿನಲ್ಲಿ ಹಾಲಿನ ಪ್ರಮಾಣ ಮತ್ತು ಕೊಬ್ಬಿನ ಪ್ರಮಾಣ ಸುಮಾರು 3–4 ವಾರಗಳಲ್ಲಿ ಜಾಸ್ತಿಯಾಗುತ್ತದೆ.
8. ಹಸುಗಳ ಆರೋಗ್ಯ ಹಾಗೂ ಗರ್ಭ ಕಟ್ಟುವಿಕೆಯ ಪ್ರಮಾಣ ಉತ್ತಮಗೊಳ್ಳುತ್ತದೆ. ಒಣ ಹುಲ್ಲು ವ್ಯರ್ಥವಾಗದೆ ಸದ್ಬಳಕೆಯಾಗುತ್ತದೆ.

**ಒಂದು ನೂರು ಕೆ.ಜಿ ಹುಲ್ಲಿನ/ಕಬ್ಬಿನ ವಾಡಿಯ ಯೂರಿಯಾ ಪರಿಷ್ಕರಣೆಗೆ ಬೇಕಾಗುವ ಸಾಮಗ್ರಿಗಳು/ಸಲಕರಣೆಗಳು.**

1. ಯೂರಿಯಾ–04 ಕೆ.ಜಿ.
2. ನೀರು ಪ್ರತಿ ನೂರು ಕೆ.ಜಿ. ಹುಲ್ಲಿಗೆ 40–45 ಲೀಟರ್
3. 100 ಕೆ.ಜಿ. ಕಬ್ಬಿನವಾಡಿ/ಜೋಳದ ಕಣಕಿ/ಭತ್ತದ ಹುಲ್ಲು
4. ಬ್ಯಾರಲ್/ನೀರಿನ ಟಾಕಿ/ಪ್ಲಾಸ್ಟಿಕ್ ಶೀಟ್
5. ಯೂರಿಯಾ ನೀರು ಸಿಂಪಡಿಸಲು ಯಂತ್ರ/ಜಾರಿ
6. ತೂಕದ ಯಂತ್ರ / ಮಶಿನ್

**ಒಣಮೇವು ಯೂರಿಯಾ ಪೌಷ್ಠೀಕರಣ ಸೂತ್ರ :**

| ಕ್ರ.ಸಂ | ಹುಲ್ಲು/ವಾಡಿ | ಯುರಿಯಾ | ನೀರು |
|---|---|---|---|
| 1 | 25 ಕೆ.ಜಿ | 1 ಕೆ.ಜಿ | 10–12 ಲೀಟರ |
| 2 | 100 ಕೆ.ಜಿ | 4 ಕೆ.ಜಿ | 40–45 ಲೀಟರ |
| 3 | 200 ಕೆ.ಜಿ | 8 ಕೆ.ಜಿ | 80–90 ಲೀಟರ |

**ಯೂರಿಯಾ ಪೌಷ್ಠೀಕರಣ/ಪರಿಷ್ಕರಣ ವಿಧಾನ :**


1. ಕಬ್ಬಿನ ವಾಡಿ /ಹುಲ್ಲು ಸಂಗ್ರಹ


2. ತೂಕ ಮಾಡುವುದು


3. ತುಂಡಾಗಿ ಕತ್ತರಿಸುವುದು


4. ಯೂರಿಯಾ ನೀರು ಮಿಶ್ರಣ


5. ಸಮನಾಗಿ ಸಿಂಪಡಿಸುವುದು


6. 21 ದಿನ ಗಾಳಿಯಾಡದಂತೆ ಮುಚ್ಚಿಡುವುದು

7. ರಾಸುಗಳಿಗೆ ಯುರಿಯಾ ಪರಿಷ್ಕರಿಸಿದ ಮೇವನ್ನು ತಿನ್ನಿಸುವದು